ಅನೇಕ ಪ್ರಶ್ನೆಗಳು ಮನದಲ್ಲಿದ್ದವು. ತನಿಖೆಯನ್ನು ಯಾವ ಕೋನದಿಂದ ಆರಂಭಿಸಬೇಕು ಅನ್ನುವುದೇ ಇನ್ನೂ ನಿರ್ಧಾರವಾಗಿರಲಿಲ್ಲ. ದಾಬರಿ ಮಾಡುವುದಕ್ಕೆ ಬಂದು ಕೊಲೆ ಮಾಡಿರೋದಾ, ಅಥವಾ ಮಾಡಿರುವ ಕೊಲೆ ಮುಚ್ಚಿ ಹಾಕೋಕ್ಕೆ ದಾಬರಿ ಅನ್ನೋ ನಾಟಕವೇ? ಯಾವುದೇ ಕ್ರೈಂಗೆ ಒಂದು ಮೋಟಿವ್ ಇರುತ್ತದೆ. ಅದೇ ಕೇಸನ್ನು ಮುಂದುವರೆಸಯಲು ಸಹಾಯ ಮಾಡೋದು. ಇಲ್ಲಿ ಅದೇ ಎಸ್ಟಾಬ್ಲಿಶ್ ಆಗ್ತಾ ಇಲ್ಲ... ಇದೆಲ್ಲದರ ಮಧ್ಯೆ ಜಯರಾಂನ ಪಾತ್ರ ಏನು?

★★★

"ಸುತ್ತಿ ಸುತ್ತಿ ಅಲ್ಲಿಗೇ ಬಂದು ನಿಲ್ಲುತ್ತಿದ್ದೇವೆ ರವಿ. ನಿನ್ನ ಪ್ರಕಾರ ಆ ಡಿಪಾರ್ಟ್‌ಮೆಂಟಲ್ ಸ್ಟೋರ್ಸ್‌ನಲ್ಲಿ ಕೂಡಾ ಏನೂ ಸಿಗಲಿಲ್ಲ. ಅಲ್ಲಿ ನಿರ್ಮಲ್‌ನಿಂದಾಗಲೀ ಜಯರಾಂನಿಂದಾಗಲೀ ಏನೂ ಸಿಗಲಿಲ್ಲ..."

ಬೇಸರದಿಂದ ನುಡಿದ ಧನಂಜಯ.

ಅದೇ ಸಮಯಕ್ಕೆ ಕಾನ್‌ಸ್ಟೆಬಲ್ ಒಬ್ಬ ಪೋಸ್ಟ್‌ಮಾರ್ಟಂ ರಿಪೋರ್ಟ್ ತಂದಿತ್ತ.

ಅದನ್ನು ವಿಶದವಾಗಿ ಓದಿ... ಕೊಂಚ ಎಕ್ಸೈಟ್ ಆದ.

"ಎಸ್... ಒಂದು ನಿಜವಾದ ಬ್ರೇಕ್ ಥ್ರೂ ರವಿ..." ಕೂಗಿದ ಧನಂಜಯ.

"ರಿಪೋರ್ಟ್ ಪ್ರಕಾರ ಚಾಕು, ಹೊಟ್ಟೆಯೊಳಗೆ ನುಗ್ಗಿ, ಅವನ ಪ್ಯಾಂಕ್ರಿಯಾಸ್ ಅನ್ನು ಕಟ್ ಮಾಡಿದೆ. ಇನ್ನೊಂದು ಚಾಕು, ಜಠರ ಮತ್ತು ಕರುಳನ್ನು ಕತ್ತರಿಸಿದೆ... ಇಂಥಾ ಗಾಯ ಆದರೆ ಹತ್ತು ನಿಮಿಷದಲ್ಲಿ ಆಸ್ಪತ್ರೆ ಸೇರದಿದ್ದರೆ ಸಾವು ಗ್ಯಾರಂಟಿ."

ಏನೂ ಅರ್ಥವಾಗದವನಂತೆ ನೋಡಿದ ರವಿ.

"ಒಬ್ಬ ವ್ಯಕ್ತಿ, ತನಗೆ ಯಾರಾದರೂ ಚಾಕು ಹಾಕಲು ಬಂದಾಗ ಏನು ಮಾಡುತ್ತಾನೆ ರವಿ?"

"ಹಿಂದೆ ಸರಿಯುತ್ತಾನೆ... ಚಾಕುವಿನಿಂದ ತಪ್ಪಿಸಿಕೊಳ್ಳಲು ಪ್ರಯತ್ನ ಪಡುತ್ತಾನೆ."

"ಹಾಗಾದಾಗ ಚುಚ್ಚಿದ ಗಾಯ ಆಳವಾಗಿರುವುದಿಲ್ಲ. ಇಲ್ಲಿ ಇವನಿಗಾದ ಗಾಯದ ಆಳ ನೋಡಿದರೆ, ಯಾರೋ ಅವನನ್ನು ಹಿಡಿದುಕೊಂಡಿದ್ದು, ಆಮೇಲೆ ಚುಚ್ಚಿದ್ದಾರೆ..."

"ಅಂದರೆ ಬಂದವರಲ್ಲೊಬ್ಬ ಒಳನುಗ್ಗಿ?"

"ಸಾಧ್ಯ ಇಲ್ಲ... ಅಲ್ಲಿ ಇನ್ನೊಬ್ಬ ಇರಲೇಬೇಕು... ಅವನು ಹಿಡಿದು ಕೊಂಡಿದ್ದಾನೆ. ಇವರಿಬ್ಬರೂ ಚುಚ್ಚಿದ್ದಾರೆ... ಎರಡೂ ಗಾಯಗಳೂ ಒಂದೇ ಬಾರಿ ಆಗಿದೆ... ಒಂದೇ ಚಾಕುವಿನಿಂದಲ್ಲ."

"ಮತ್ತೆ ನಮಗೆ ಸಿ.ಸಿ ಟೀವಿಯಲ್ಲಿ ಕಂಡಿದ್ದು ಇಬ್ಬರೇ ಅಲ್ವಾ ಸಾರ್?" ಪ್ರಶ್ನಿಸಿದ ರವಿ.

"ಅವರು ಅಚಾನಕ್ ಆಗಿ ನೋಡಿಲ್ಲ ರವಿ. ಅದು ನಮಗೆ ಬಿಟ್ಟಿರುವ ಕ್ಲೂ... ನಮಗೆ ಕನ್‌ಫ್ಯೂಸ್ ಮಾಡಲು... ಮೂರನೇ ವ್ಯಕ್ತಿಯ ಬಗ್ಗೆ ಯೋಚಿಸದಿರಲು."

"ಏನೋ ದೊಡ್ಡ ಕಾರಸ್ಥಾನವೇ ನಡೆದಿದೆ ಸರ್ ಹಾಗಾದ್ರೆ... ನಾವಂದುಕೊಂಡಂತೆ ಸಿಂಪಲ್ ಆಗಿಲ್ಲ ಈ ಕೇಸ್..."

"ನಿಜ... ನನಗೇನೋ ಈ ಕೇಸ್‌ನಲ್ಲಿ ಆ ಅಡುಗೆಯವನು ಸುಖಾ ಸುಮ್ಮನೆ ಸಿಕ್ಕಿಕೊಂಡಿಲ್ಲ ಅಂತಾ ಅನಿಸುತ್ತಿದೆ ರವಿ. ಅವನ ಹಿನ್ನೆಲೆ ತಿಳಿದುಕೋ. ಅವನ ಕಾಲ್ ರೆಕಾರ್ಡ್ ತರಿಸು."

ಅದೇ ಸಮಯಕ್ಕೆ ನಿರ್ಮಲ್ ಬಾಗಿಲನ್ನು ತಳ್ಳುತ್ತಾ ಒಳಬಂದ.

"ಸರ್ ಜಯರಾಂ ಇವತ್ತು ಬೆಳಗ್ಗೆ ಫೋನ್ ಮಾಡಿ ಹೆದರಿಸಿದ. ಹಣ ಕೊಡಲು ಆಗದೇ, ನಾನೇ ಈ ನಾಟಕ ಮಾಡಿದ್ದೇನೆ ಅಂತಾ ಆರೋಪಿಸಿದ. ತಕ್ಷಣ ಹಣ ಕೊಡದಿದ್ದರೆ ಕೋರ್ಟಿಗೆ ಎಳೆಯುತ್ತೇನೆ ಅಂತಾ ಹೆದರಿಸುತ್ತಿದ್ದಾನೆ... ಅವನನ್ನು ಅರೆಸ್ಟ್ ಮಾಡಿ ಸರ್..."

